ಏನಿದೆ ಅದರಲ್ಲೂ ಮುಖ್ಯವಾಗಿ ಎ.ಇ.ಹೆಚ್.ಗೆ ಸಂಬಂಧಪಟ್ಟ ಹಾಗೆ, ಸಿಂಗಲ್ ಫೇಸಿಂಗ್ ಇರತಕ್ಕಂಥದ್ದರ ಬಗ್ಗೆ, ರೈತರು ಅನಧಿಕೃತವಾಗಿ ಪಂಪ್‌ಸೆಟ್ ಹಾಕಿಕೊಂಡಿರುವ ಬಗ್ಗೆ ಪೆನಾಲ್ಟಿ ಹಾಕುತ್ತೇವೆಂದು ಹೇಳಿರುವುದು, ಪೆನಾಲ್ಟಿ ಕಟ್ಟದೇ ಹೋದರೆ ಅಂಥವರನ್ನು ಜೈಲಿಗೆ ಕಳುಹಿಸುವ ಬಗ್ಗೆ ಮತ್ತು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಆ ಆರ್ಡರ್‌ನಲ್ಲಿ ಏನು ಇದೆ ಇವುಗಳನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾವು ಹೇಳಿದ್ದೇವೆ. ಆದರೆ ಸರ್ಕಾರ ಅದಕ್ಕೆ ಒಪ್ಪುತ್ತಿಲ್ಲ. ಆದ ಕಾರಣ ನಾವೆಲ್ಲರೂ ಸೇರಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆ ಆರ್ಡರ್‌ನ್ನು ವಿತ್‌ಡ್ರಾ ಮಾಡಲೇಬೇಕು ಎಂದು ಒತ್ತಾಯಿಸುತ್ತಿದ್ದೇವೆ. ವಿತ್‌ಡ್ರಾ ಮಾಡಲಿಲ್ಲ ಎಂದರೆ ನಾವು ಧರಣಿ ಕೂರುತ್ತೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವೈ. ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೊರಡಿಸಿರುವ ಎರಡೂ ಸರ್ಕಾರಿ ಆದೇಶವನ್ನು ವಿತ್‌ಡ್ರಾ ಮಾಡುತ್ತೀರೋ ಅಥವಾ ಪುನರ್‌ಪರಿಶೀಲನೆ ಮಾಡುತ್ತೀರೋ ಅಥವಾ ಎರಡೂ ಆರ್ಡರನ್ನು ರಿವೈಸ್ ಮಾಡುತ್ತೀರೋ ಅಥವಾ ನೀವು ಸದನ ಸಮಿತಿಯನ್ನಾದರೂ ಮಾಡಿ ರಿವೈಸ್ ಮಾಡಿಸಿ. ಇಷ್ಟನ್ನು ನೀವು ಮಾಡುವುದಕ್ಕೆ ಆಗದಿದ್ದರೆ ನಾವು ಬೇರೆ ವಿಧಿಯಿಲ್ಲದೇ ನಿಮ್ಮ ನಿರ್ಧಾರವನ್ನು ವಿರೋಧಿಸಿ ನಾವು ಕೂಡ ಧರಣಿ ಕೂರುತ್ತೇವೆ.

(ಬಿ.ಜೆ.ಪಿ. ಸದಸ್ಯರು ಕೂಡ ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಸದನ ಸಮಿತಿ ಮಾಡಿರತಕ್ಕಂಥ ಅನೇಕ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಲ್ಲ. ಇದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿದೆ. ವರದಿಯಲ್ಲಿ ಬಾಕಿ ಇರತಕ್ಕಂಥ 700 ಕೋಟಿ ರೂಪಾಯಿಗಳನ್ನು ಸರ್ಕಾರ ವಸೂಲಿ ಮಾಡಬೇಕು ಎಂದು ಹೇಳಲಾಗಿದೆ. ಆದರೆ ಸರ್ಕಾರ ಅದನ್ನು ಮಾಡಿಲ್ಲ. 6 ತಿಂಗಳೊಳಗಾಗಿ ಈ ಕೆಲಸವನ್ನು ಮಾಡಬೇಕು ಎಂದು ವರದಿಯಲ್ಲಿ ಹೇಳಲಾಗಿತ್ತು. ಇದಲ್ಲದೇ ಒಟ್ಟು 13 ರೆಕಮೆಂಡೇಶನ್‌ನಲ್ಲಿ 12 ರೆಕಮೆಂಡೇಶನ್‌ನ್ನು ಸರ್ಕಾರ ಒಪ್ಪಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ರೈತರುಗಳೇ ವಾಲಂಟರಿಯಾಗಿ ಬಂದು ನಾವು ಹಾಕಿರುವ ಪೆನಾಲ್ಟಿಯನ್ನು ಒಪ್ಪಿಕೊಂಡು ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಕಟ್ಟಿ ರೆಗ್ಯುಲರೈಸ್ ಮಾಡಿಸಿಕೊಂಡಿದ್ದಾರೆ. ಆದರೆ ಈಗ ಉಳಿದಿರುವ ಬಾಕಿ ವಸೂಲಿಯಾಗಬೇಕಾಗಿರುವುದು ಪಬ್ಲಿಕ್ ಸೆಕ್ಟಾರ್ ಕಂಪನಿಗಳಿಂದ, ಕಾರ್ಪೊರೇಶನ್‌ಗಳಿಂದ, ಮುನಿಸಿಪಾಲಿಟಿಯಿಂದ, ವಾಟರ್ ಸಪ್ಲೈ ಬೋರ್ಡ್‌ನವರಿಂದ ಮಾತ್ರ.

(ಗೊಂದಲ)

ಶ್ರೀ ಬಿ. ಟಿ. ಶಿವಪ್ಪ:- ಇದನ್ನು ಸದನ ಸಮಿತಿಗೆ ರೆಫರ್ ಮಾಡಿ.

ಶ್ರೀ ಸಿದ್ಧರಾಮಯ್ಯ:- ಸದನ ಸಮಿತಿ ಲಿಮಿಟೆಡ್ ಪರ್ಪಸ್‌ಗೆ ಮಾಡಿದ್ದು, ಅದು ಮುಗಿದು ಹೋಯಿತು.

ಅಧ್ಯಕ್ಷರು:- ಈಗಾಗಲೇ ಸಾಕಷ್ಟು ಹೊತ್ತು ಆಗಿದೆ. ವೈ. ರಾಮಕೃಷ್ಣರವರೇ ಈಗ ಅಡ್ಜೆರ್ನ್ ಮಾಡೋಣವೇ.

(ಈ ಹಂತದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ಮಾನ್ಯ ಸದಸ್ಯರುಗಳೆಲ್ಲರೂ ಬಾವಿಯಲ್ಲೆ ಧರಣಿ ನಡೆಸಿದ್ದರು)

ಮಾನ್ಯ ಖಿರ್ಗೆಯವರೇ, ಈಗಾಗಲೇ ಹೊತ್ತಾಗಿದೆ, ಈಗ ಸಭೆಯನ್ನು ಮುಕ್ತಾಯಮಾಡಿ ಮತ್ತು ನಾಳೆ ಸೇರೋಣ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ಮುನಿಸಿಪಾಲಿಟಿಯಲ್ಲಿ ಬಾಕಿ ಇದ್ದು, ಅವರಿಗೆ ಸಂಬಳ ಕೊಡುವುದಕ್ಕೆ ನಾವು ಮೀಟಿಂಗ್ ಮಾಡಿ ಅವರಿಗೆ ನಾವು ಸಂಬಳ ಕೊಟ್ಟಿದ್ದೇವೆ. ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲದೆ ಎಲ್ಲಾ ಬಂದು ಗಲಾಟೆ ಮಾಡಿಕೊಂಡು ಕುಳಿತಿದ್ದರು. ಅವರಿಗೆ ಸಂಬಳ ಕೊಟ್ಟೆವು. ಅಲ್ಲಿ ವಿದ್ಯುಚ್ಛಕ್ತಿ ಬಾಕಿ ಈಗ ವಸೂಲು ಮಾಡುವುದಕ್ಕಾಗುತ್ತದೆಯೇ? ಇನ್ನು ವಾಟರ್ ಸಪ್ಲೈ ಬೋರ್ಡ್‌ನವರ ಮೇಲೆ ಕೇಸ್ ಹಾಕಿ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಕರೆಂಟ್ ಡಿಸ್‌ಕನೆಕ್ಟ್ ಮಾಡುವುದಕ್ಕಾಗುತ್ತದೆಯೇ? ಈ ತರಹ ಸುಮಾರು 300-400 ಕೋಟಿ ರೂಪಾಯಿಗಳ ಬಾಕಿ ಇದೆ. ಮೈಸೂರು ಸಿಟಿಯಲ್ಲಿ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗಿರುವ ಕಡೆಯೆಲ್ಲಾ ಅವರೇ ಕಂಬ ನೆಟ್ಟು ಕನೆಕ್ಷನ್ ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ. ಅನ್ ಆಥರೈಸ್ಡ್ ಕನೆಕ್ಷನ್‌ನಲ್ಲಿ ಎರಡು ವಿಧವಿದೆ. ಅದನ್ನು ಅವರು ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೆಲವರು ಅಪ್ಲಿಕೇಷನ್ ಹಾಕಿದ್ದರೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿ ವರ್ಕ್ ಆರ್ಡರ್ ಇಶ್ಯೂ ಆಗಿದೆ. ಆದರೆ ಪ್ರಿಯಾರಿಟಿ ಲಿಸ್ಟ್‌ನಲ್ಲಿ ಇಲ್ಲ ಎಂದು ಅವರೇ ತೆಗೆದುಕೊಂಡು ಬಿಟ್ಟಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್:- ಅವರೇ ಕಂಟ್ರಾಕ್ಟರ್ ಮೂಲಕ ಕಂಬ ಕೊಟ್ಟು ಕೆ.ಇ.ಬಿ.ಯಿಂದ ವೈರ್ ತೆಗೆದುಕೊಂಡು ಮಾಡಿದ್ದು ಅಂತಹವಕ್ಕೆ ಸ್ಯಾಂಕ್ಷನ್ ಆಗಿ ಪ್ರಿಯಾರಿಟಿಯಲ್ಲಿ ಏನಾದರೂ ಮಿಸ್ಟೇಕ್ ಆಗಿ ಮುಂಚೆ ಕೊಟ್ಟಿದ್ದಕ್ಕೆ ಅಲ್ಲಿ.

ಶ್ರೀ ಹೆಚ್.ಎನ್. ನಂಜೇಗೌಡ:- ತಮ್ಮ ಮುಖೇನ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ. ಅವರಿಗೆ ಈಗ ತಕ್ಷಣ ವಿತ್‌ಡ್ರಾ ಮಾಡುವುದಕ್ಕೆ ಕಷ್ಟವಾದರೆ ಬೇಕಾದರೆ ಚೇಂಬರ್‌ನಲ್ಲಿ ಕರೆಯಿರಿ. ಕನ್‌ಫ್ಯೂಷನ್ ಏನಿದೆ ಅದನ್ನು ವಿವರಣೆ ಕೊಡುತ್ತಾರೆ, let us understand the problem; let them also give proper remedy. ಈಗ ಅವರಿಗೆ ರೈತರನ್ನು ಕಂಡರೆ ಆಸಕ್ತಿ ಇಲ್ಲ ಎಂದು ನಾನು ಹೇಳುವುದಿಲ್ಲ. ಅವರಿಗೂ ಆಸಕ್ತಿ ಇದೆ, ನಮಗೂ ಆಸಕ್ತಿ ಇದೆ, ಎಲ್ಲರಿಗೂ ಆಸಕ್ತಿ ಇದೆ. ಆದರೆ ಆ ಆಸಕ್ತಿ